# ಕುವೆಂಪು ಬೇಂದ್ರೆ: ಆಧ್ಯಾತ್ಮ ಚಿಂತನೆಗಳ ಒಳಹೊರಗು

ಇಮ್ತಿಯಾಜ ಖಾನ್* & ಹೊಂಬಯ್ಯ ಎಚ್.**

DOI: https://doi.org/10.5281/zenodo.21188981

**ABSTRACT**

ಕನ್ನಡ ಸಾಹಿತ್ಯದ ದಿಗ್ಗಜರಾದ ಕುವೆಂಪು ಮತ್ತು ದ. ರಾ. ಬೇಂದ್ರೆಯವರ ಸಾಹಿತ್ಯದಲ್ಲಿನ ಆಧ್ಯಾತ್ಮಿಕ ದರ್ಶನವನ್ನು ಈ ವಿಶ್ಲೇಷಣೆ ಪರಿಶೀಲಿಸುತ್ತದೆ. ಕುವೆಂಪುರವರ 'ಜಲಗಾರ', 'ಯಮನ ಸೋಲು' ಮತ್ತು 'ಮಹಾರಾತ್ರಿ' ನಾಟಕಗಳಲ್ಲಿನ ಅಧ್ಯಾತ್ಮವು ಪ್ರಕೃತಿ ಪ್ರೇಮ, ಮಾನವತಾವಾದ ಹಾಗೂ ಪ್ರೇಮದ ಶಕ್ತಿಯ ಮೂಲಕ ವ್ಯಕ್ತವಾಗಿದೆ. ಮತ್ತೊಂದೆಡೆ, ಬೇಂದ್ರೆಯವರ 'ನಾಕುತಂತಿ' ಮತ್ತು 'ಹಕ್ಕಿ ಹಾರುತಿದೆ' ಕವಿತೆಗಳಲ್ಲಿನ ತಾತ್ವಿಕತೆ ಹಾಗೂ ಕಾಲದ ಚಲನಶೀಲತೆಯು ವೈದಿಕ ಮತ್ತು ಅರವಿಂದರ ದರ್ಶನಗಳ ಹಿನ್ನೆಲೆಯಲ್ಲಿ ವಿವರಿಸಲಾಗಿದೆ. ಇಬ್ಬರು ಕವಿಗಳೂ ತಮ್ಮ ಕೃತಿಗಳ ಮೂಲಕ ಆಧ್ಯಾತ್ಮಿಕತೆಯನ್ನು ಕೇವಲ ಧಾರ್ಮಿಕ ಚೌಕಟ್ಟಿನಲ್ಲಿ ಬಂಧಿಸದೆ, ಅದನ್ನು ಬದುಕಿನ ಸಮಗ್ರ ಚೇತನ ಹಾಗೂ ದಾರ್ಶನಿಕ ನೆಲೆಯಲ್ಲಿ ಪ್ರತಿಪಾದಿಸಿರುವುದನ್ನು ಅವಲೋಕಿಸುವುದು ಈ ಲೇಖನದ ಮುಖ್ಯ ಆಶಯವಾಗಿದೆ.

**KEYWORDS:** ಕುವೆಂಪು, ಬೇಂದ್ರೆ, ಆಧ್ಯಾತ್ಮಿಕತೆ, ನವೋದಯ ಸಾಹಿತ್ಯ, ದಾರ್ಶನಿಕತೆ.

* **ಇಮ್ತಿಯಾಜ ಖಾನ್,** ಸಂಶೋಧನಾರ್ಥಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

** **ಡಾ. ಹೊಂಬಯ್ಯ,** ಮಾರ್ಗದರ್ಶಕರು, ಶ್ರೀಮತಿ ಕುಸುಮಾವತಿ ಮಿರ್ಜಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಬೇಡಕಿಹಾಳ, ಚಿಕ್ಕೋಡಿ ತಾಲೂಕು.

ಕುಪ್ಪಳ್ಳಿಯ ವೆಂಕಟಪ್ಪನ ಮಗ ಪುಟ್ಟಪ್ಪನವರು ಕುವೆಂಪು ಎಂದು ವ್ಯಾಪಕವಾಗಿ ಪ್ರಸಿದ್ಧರಾಗಿದ್ದಾರೆ. ಅವರಂತೆಯೇ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು ದ. ರಾ. ಬೇಂದ್ರೆ ಎಂದು ವ್ಯಾಪಕವಾಗಿ ಪ್ರಸಿದ್ಧರಾಗಿದ್ದಾರೆ. ಇಬ್ಬರಲ್ಲಿಯೂ ಸಮಾನವಾದ ಸಂಗತಿಗಳೆಂದರೆ ಅವರಿಬ್ಬರೂ ಕನ್ನಡದ ಪ್ರಮುಖ ಕವಿಗಳು, ವಿಮರ್ಶಕರು ಮತ್ತು ನಾಟಕಕಾರರಾಗಿದ್ದರು ಎಂಬುದು. ಕನ್ನಡ ಸಾಹಿತ್ಯಕ್ಕೆ ಇಬ್ಬರ ಕೊಡುಗೆಗಳೂ ಅಪಾರ ಮತ್ತು ಅನನ್ಯ. ಇಬ್ಬರೂ ಕನ್ನಡ ನವೋದಯ ಚಳವಳಿಯ ಪ್ರಮುಖರು.

ಕುವೆಂಪುರವರ ನಾಟಕಗಳಲ್ಲಿ ಆಧ್ಯಾತ್ಮ ಚಿಂತನೆಯ ನೆಲೆಗಳು ಅವರ ಜಲಗಾರ ನಾಟಕದಿಂದಲೇ ಗುರುತಿಸಲು ಸಾಧ್ಯವಿದೆ. ಜಲಗಾರನಿಂದ ಹಿಡಿದು ಮುಂದೆ 14 ನಾಟಕಗಳವರೆಗೆ ಕುವೆಂಪುರವರ ನಾಟಕಗಳ ಪಟ್ಟಿ ಬೆಳೆಯುತ್ತ ಸಾಗುತ್ತದೆ. ಅವೆಲ್ಲ ಆಧ್ಯಾತ್ಮಿಕತೆಯಿಂದ ಸಮೃದ್ಧವಾದ ನಾಟಕಗಳೇ ಆದರೂ ಅವರ ಎರಡು ಪ್ರಾತಿನಿಧಿಕ ನಾಟಕಗಳನ್ನು ಮಾತ್ರ ಇಟ್ಟುಕೊಂಡು ನಾನಿಲ್ಲಿ ಚರ್ಚಿಸಲು ಬಯಸಿದ್ದೇನೆ.

ಜಲಗಾರ ನಾಟಕದ ಆರಂಭದಲ್ಲಿಯೇ ಭೂದೇವಿಯ ಹಾಡನ್ನು ಕೇಳುತ್ತೇವೆ. 'ಮಬ್ಬಿನ ಮಂಜಿನ ಮುಸುಗನು ಎತ್ತಿ, ಬಾರಾ ಉದಯಾಚಲವನು ಹತ್ತಿ' ಎನ್ನುತ್ತ ಅತ್ಯಂತ ಸಮ್ಮೋಹನದಿಂದ ಆಕೆ ಹಾಡುತ್ತ ಉಷೆಯನ್ನು ಸ್ವಾಗತಿಸುತ್ತಾಳೆ. ಭಾರತದ ಸಂಸ್ಕೃತಿಯಲ್ಲಿ ಬ್ರಾಹ್ಮಿ ಮುಹೂರ್ತ ಅತ್ಯಂತ ಶ್ರೇಷ್ಠವಾದುದು, ಬೆಳಿಗ್ಗೆ ಬ್ರಾಹ್ಮಿ ಮುಹೂರ್ತದಲ್ಲಿಯೇ ಏಳಬೇಕು ಎಂದು ಹೇಳಲಾಗಿದೆ. ಪುರಾತನ ಕಾಲದಿಂದಲೂ ನಮ್ಮ ಋಷಿಮುನಿಗಳ ದಿನನಿತ್ಯದ ವಾಡಿಕೆಯೂ ಅದೇ ಆಗಿತ್ತು. ಬ್ರಾಹ್ಮಿ ಮುಹೂರ್ತ ಸೂರ್ಯೋದಯಕ್ಕಿಂತಲೂ ಒಂದು ತಾಸು ಮುಂಚಿನ ಅವಧಿ. ಈ ಮುಹೂರ್ತದಲ್ಲಿ ಎದ್ದರೆ ಮನುಷ್ಯನಲ್ಲಿ ದೈಹಿಕ ಮತ್ತು ಮಾನಸಿಕ ಆರೋಗ್ಯ ವರ್ಧಿಸುತ್ತದೆ, ಏಕಾಗ್ರತೆ ಹೆಚ್ಚುತ್ತದೆ, ಸತ್ವಗುಣಗಳು ಬೆಳೆಯುತ್ತವೆ, ನಕಾರಾತ್ಮಕ ಶಕ್ತಿಗಳ ನಿರ್ಮೂಲನೆ ಆಗುತ್ತದೆ ಎಂದು ಹೇಳಲಾಗುತ್ತದೆ.

ಸೂರ್ಯೋದಯಕ್ಕಿಂತ ಮುಂಚಿತವಾಗಿ ಎದ್ದರೆ ನಮ್ಮ ಎಲ್ಲ ದಿನನಿತ್ಯದ ಚಟುವಟಿಕೆಗಳು ಸಾಂಗವಾಗುತ್ತವೆ. ಹಾಗಾಗಿ ಭೂದೇವಿಯು ಉಷಾಕಾಲವನ್ನು ಸ್ವಾಗತಿಸುತ್ತಿರುವುದು ಪರೋಕ್ಷವಾಗಿ ಜನರಿಗೆ ಕೊಡುವ ಆಧ್ಯಾತ್ಮಿಕ ಎಚ್ಚರದ ಗಂಟೆ ಎನ್ನುವಂತೆ ಚಿತ್ರಿಸಿದ್ದಾರೆ ಕುವೆಂಪು. ಮಬ್ಬಿನ ಮಂಜು ಕವಿದ ಹೃದಯಗಳು ಪ್ರಕೃತಿಯ ರಮ್ಯತೆಯನ್ನು ಅನುಭವಿಸಲಾರರು. ಅವರ ಬದುಕು ಆನಂದದ ಮಕರಂದವಾಗಲಾರದು. ಬೇಗ ಎದ್ದು ತಮ್ಮ ಚಟುವಟಿಕೆಗಳಲ್ಲಿ ನಿರತರಾದರೆ ದಕ್ಕುವ ಬದುಕಿನ ಸಂತಸವೇ ಬೇರೆ. ಅಂತೆಯೇ ಸೂರ್ಯನು ಉದಯಾಚಲವನ್ನು ಹತ್ತಿ ಬಂದಿದ್ದಕ್ಕೂ ಸಾರ್ಥಕವಾಗುತ್ತದೆ ಎನ್ನುವುದನ್ನು ಗಮನಿಸಬೇಕು.

ಕುವೆಂಪು ಮುಂದುವರೆದು ಜಲಗಾರನ ಆಧ್ಯಾತ್ಮಿಕತೆಯ ಉನ್ನತಿಯನ್ನು ಚಿತ್ರಿಸುತ್ತಾರೆ. ಆತನಿಗೆ ಸೂರ್ಯೋದಯ ಕೇವಲ ಪ್ರಕೃತಿಯ ಒಂದು ವಿದ್ಯಮಾನ

ಮಾತ್ರವಲ್ಲ ಅದೊಂದು ಅಸಾಧಾರಣ ದಿವ್ಯ ಬೆಳಕಿನ ಆಗಮನ. ಅದು ಅಷ್ಟೇ ಚೇತೋಹಾರಿಯಾದುದು. ಅಂತೆಯೇ ಅವನು ಕಾಣುವ ಸೂರ್ಯನು: ಮೂಡಣದ ಬಾನೆಡೆಯೊಳು ಓಕುಳಿಯ ಚೆಲ್ಲುತ್ತ ಮೂಡುತ್ತಿದ್ದಾನೆ. ದೆಸೆದೆಸೆಗೆ ಪಸರಿಸಿದ ಅಜ್ಞಾನದ ಅಂಧಕಾರವನು ಕಳೆದು ಮೂಡುತ್ತಿದ್ದಾನೆ. ಪ್ರಕೃತಿಯ ಚಟುವಟಿಕೆಗಳಿಗೆ ಇಂಬಾಗುತ್ತಿದ್ದಾನೆ.

ಈ ಜಲಗಾರನಿಗೆ ಜನರ ಮೇಲೆ ಒಂದು ರೀತಿಯ ಬೇಸರ. ಏಕೆಂದರೆ ಅವರು ಬದುಕಿನ ವಾಸ್ತವ ಅರಿತವರಲ್ಲ. ದೇವರನ್ನು ಸುಂದರ ಪ್ರಕೃತಿಯಲ್ಲಿ ಕಾಣುವ ನಿಸ್ಪೃಹ ಮನೋಭಾವನೆ ಅವರಲ್ಲಿಲ್ಲ. ನಿಮ್ಮ ಸೌಂದರ್ಯದಲಿ ಪರಮಾತ್ಮನನ್ನು ಕಾಣದಿದ್ದರೆ, ಕಣ್ಣೆರಡು ಇದ್ದರೇನು ಪ್ರಯೋಜನ? ಜಗದ ದೇಗುಲದಲ್ಲಿ ಜಗದುದಯ ಕಾರಣನ ಕಾಣದವನು ಗುಡಿಯಲ್ಲಿ ಶಿವನನ್ನು ಕಾಣುವುದು ಹೇಗೆ? ಎಂದು ಮರುಕ ವ್ಯಕ್ತಪಡಿಸುತ್ತಾನೆ. ದೇವರು ಕರ್ಪೂರದಲ್ಲಿಲ್ಲ, ಮಂಗಳಾರತಿಯಲ್ಲಿಲ್ಲ, ಹೂವುಗಳಲ್ಲಿಲ್ಲ, ಅವನು ನಮ್ಮೊಳಗೆ ಇರುವನು ಎನ್ನುವ ಆಧ್ಯಾತ್ಮಿಕ ಐಕ್ಯದ ಸತ್ಯ ಅವನಿಗೆ ತಿಳಿದಿದೆ. ಅಂತೆಯೇ ಆತ ಮಹಾನ್ ದಾರ್ಶನಿಕನಾಗಿ ಕಂಡುಬರುತ್ತಾನೆ. ಕುವೆಂಪುರವರ ಕಲ್ಪನೆಯ ಮಹೋನ್ನತಿಯನ್ನು ಇನ್ನು ವಿವರಿಸಲು ಸಾಧ್ಯವಿದೆ.

ಕುವೆಂಪು ಲೌಕಿಕರ ಧರ್ಮದ ವ್ಯಾಖ್ಯಾನ ನಂಬಿದವರಲ್ಲ. ಅವರ ಪ್ರಕಾರ ಧರ್ಮ ಎಂದರೆ ಪುರೋಹಿತಶಾಹಿಯ ಅಂಧಾನುಸರಣೆಯಲ್ಲ. ಅಥವಾ ಕಲ್ಲಿನ ದೇವರ ಎದುರು ಕಾಡಿಬೇಡುವುದೂ ಅಲ್ಲ. ಸತ್ತ ಕಲ್ಲುಗಳ ಮುಂದೆ ಅತ್ತು ಕರೆದುದು ಸಾಕು ಎನ್ನುತ್ತಾರೆ ಅವರು. ಅಂದರೆ ಅವರ ಧರ್ಮ ಜಡವಾದುದಲ್ಲ. ಅದು ಚೇತನಸ್ವರೂಪಿ; ಆನಂದಮಯವಾದುದು. ಹಾಗಾಗಿ ಯಮನ ಸೋಲು ನಾಟಕದಲ್ಲಿ ಅವರು ಸಾವಿತ್ರಿಯ ಮೂಲಕ ಯಮನಿಗೆ ಕೇಳುತ್ತಾರೆ: ಚೇತನ ಸ್ವರೂಪಿ ದೇವರು ಈ ಜಡಜಗತ್ತನ್ನು ಸೃಷ್ಟಿಸಿ ಸುಮ್ಮನಾಗಿಬಿಟ್ಟನೇ! ನೀನು ಅಂದುಕೊಂಡಂತೆ ಧರ್ಮ ಅದಲ್ಲ. ನಿನ್ನ ಬುದ್ಧಿಗೆ ಮೀರಿ, ನನಗೂ ಕಾಣದಿರುವ, ತರ್ಕ ವಾದ-ವಿವಾದಗಳಿಗೆಲ್ಲ ಮೀರಿದ ಧರ್ಮವೊಂದಿರಬೇಕು. ಅದುವೆ ಪ್ರೇಮ ಎನ್ನುತ್ತಾಳೆ ಅವಳು.

ಪ್ರೇಮಾನುರಾಗವು ಧರ್ಮವನ್ನು ಮೀರಿ ಇರುವಂತಹುದು. ಅದನ್ನು ಸಾಧಿಸಿ ತೋರಿಸುವೆನು. ಎದೆಯ ಒಲವು ಋತುನಿಯಮಕೆ ಅತೀತವಾದುದು ಎಂಬುದನು ತೋರಿಸುವೆನು. ಸರ್ವ ಧರ್ಮವ ಮೀರಿದ ಧರ್ಮವೊಂದುಂಟು ಎಂಬುದನು ಇಂದು ಸಾಧಿಸಿ ತೋರುವೆನು. ಪ್ರೇಮದ ಶಕ್ತಿ ಏನೆಂಬುದು ತೋರಿಸುವೆ ಎನ್ನುತ್ತ ಗಟ್ಟಿ ಸಂಕಲ್ಪ ಮಾಡಿ ನಾಟಕದ ಕೊನೆಗೆ ಅವಳು ಅದನ್ನು ಸಾಧಿಸಿ ತೋರುತ್ತಾಳೆ. ಧರ್ಮವನ್ನು ಮೀರಿದ ಪ್ರೇಮದಿಂದ ಸತ್ತ ಗಂಡನನು ಮರಳಿ ಜೀವಂತವಾಗಿಸಿಕೊಳ್ಳುತ್ತಾಳೆ. ಇಂತಹ ಆಧ್ಯಾತ್ಮಿಕ ಮತ್ತು ವೈಚಾರಿಕ ಪರಿಕಲ್ಪನೆಗಳು ಕುವೆಂಪುರವರ ವ್ಯಕ್ತಿತ್ವವನ್ನು ಅತ್ಯಂತ ಉಜ್ವಲವಾಗಿ ಕಟ್ಟಿಕೊಡುತ್ತವೆ.

ಕುವೆಂಪುರವರ ಮಹಾರಾತ್ರಿ ನಾಟಕವೂ ಅತ್ಯಂತ ಮಹತ್ವದ ನಾಟಕ ಎಂದು ಪರಿಗಣಿಸಬಹುದು. ಸಿದ್ಧಾರ್ಥನು ಬುದ್ಧನಾಗುವ ಬಗೆ ಅತ್ಯಂತ ಮನೋಜ್ಞವಾಗಿ

ಚಿತ್ರಿಸಿರುವ ಈ ನಾಟಕದ ಕಥನ ಹಂದರ ಆಧ್ಯಾತ್ಮಿಕತೆಯಿಂದ ಪರಿಪೂರ್ಣವಾಗಿದೆ. ಸಿದ್ಧಾರ್ಥನಿಗೆ ಬುದ್ಧನಾಗುವ ಹಂಬಲವಿದ್ದರೂ ಅವನ ಬದುಕಿನಲ್ಲಿ ಅವನು ತಂದುಕೊಂಡ ಪರಿವರ್ತನೆ ಮತ್ತು ಆ ಪರಿವರ್ತನೆಗಳಿಗಾಗಿ ಆತ ತನ್ನನ್ನು ಸಜ್ಜುಗೊಳಿಸಿಕೊಂಡ ಬಗೆ ಬೆರಗಾಗಿಸುತ್ತದೆ. ಹೆಂಡತಿಯನ್ನು ಬಿಟ್ಟಾರು ಹೋಗುವರು? ಅರಮನೆಯನು ಬಿಟ್ಟಾರು ಹೋಗುವರು? ಮಗುವನು ಬಿಟ್ಟಾರು ಹೋಗುವರು? ಎಂದು ಅವನ ಪರಿಚಾರಕ ಚನ್ನನು ಕೇಳಿದ್ದಕ್ಕೆ ಬುದ್ಧನು ಕೊಡುವ ಉತ್ತರ: ಲೋಕವೆಲ್ಲ ಅಜ್ಞಾನದ ಕತ್ತಲೆಯಲಿ ಮುಳುಗಿರುವಾಗ, ಆ ಅಜ್ಞಾನವನ್ನು ಕಳೆದು ಲೋಕಕೆ ಆನಂದವನ್ನು ಕರುಣಿಸಲು ಯಾರಾದರೂ ಮುಂದಾಗಲೇಬೇಕಲ್ಲವೇ! ಲೋಕಕಲ್ಯಾಣಕೆ ಎಳೆಸುತಿಹುದು ಜೀವ ಎನ್ನುತ್ತಾನೆ. ಅದಕ್ಕಾಗಿಯೇ ತಾನು ಎಲ್ಲ ಮೋಹಗಳಿಂದ ಬಿಡುಗಡೆಗೊಳ್ಳುವ ಅಗತ್ಯವಿದೆ ಎನ್ನುತ್ತಾನೆ. ಅದರಂತೆ ನಡೆಯುತ್ತಾನೆ. ದೂರ ನಡೆದು ಮರೆಯಾಗುತ್ತಾನೆ. ಆತ ಬುದ್ಧನಾಗುತ್ತಾನೆ. ಲೋಕದ ಪಾಲಿಗೆ ಬೆಳಕಾಗುತ್ತಾನೆ. ಇಡೀ ನಾಟಕದ ಮಾತುಕಥೆ ಆಧ್ಯಾತ್ಮಿಕತೆಯಿಂದ ತುಂಬಿದೆ. ಇಂತಹ ಆಧ್ಯಾತ್ಮಿಕತೆಯ ಒಳನೋಟಗಳು ಕುವೆಂಪು ತಮ್ಮ ಸಾಹಿತ್ಯದ ತುಂಬಾ ಅತ್ಯಂತ ಮನೋಹರವಾಗಿ ಚಿತ್ರಿಸಿದ್ದಾರೆ.

ಕುವೆಂಪುರವರಂತೆ ಬೇಂದ್ರೆಯೂ ಆಧ್ಯಾತ್ಮಿಕ ಜೀವಿಯೇ. ಆದರೆ ಬೇಂದ್ರೆಯವರ ನಾಟಕಗಳಲ್ಲಿ ಅಷ್ಟಾಗಿ ಆಧ್ಯಾತ್ಮಿಕತೆ ಇಲ್ಲ. ಅದಕ್ಕೆ ಕಾರಣ ಬೇಂದ್ರೆ ನಾಟಕಗಳು ಕುವೆಂಪು ನಾಟಕಗಳಂತೆ ಪೌರಾಣಿಕ ನಾಟಕಗಳಲ್ಲ, ಅವು ಸಾಮಾಜಿಕ ನಾಟಕಗಳು. ಅಲ್ಲಿ ಮನುಷ್ಯನ ಸಾಮಾಜಿಕ ಬದುಕಿಗೆ ಸಂಬಂಧಪಟ್ಟ ಸೋಲು, ಗೆಲುವು, ಅಜ್ಞಾನ, ದೊಡ್ಡಸ್ತಿಕೆ, ಸಣ್ಣತನ, ಶ್ರೀಮಂತಿಕೆ, ವರ್ಗಸಂಘರ್ಷ, ವರ್ಣಸಂಘರ್ಷ, ಸ್ತ್ರೀಯರ ಹತಾಶೆಗಳು, ಕುಟುಂಬ ಇವನ್ನೇ ನೋಡಬಹುದು.

ಹಾಗಾಗಿ ಈ ಲೇಖನದಲ್ಲಿ ಬೇಂದ್ರೆಯವರ ನಾಕುತಂತಿ ಮತ್ತು ಹಕ್ಕಿಹಾರುತಿದೆ ಎಂಬ ಎರಡು ಕವಿತೆಗಳಲ್ಲಿನ ಆಧ್ಯಾತ್ಮಿಕ ಚಿಂತನೆಯ ನೆಲೆಗಳನ್ನು ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ. ಬೇಂದ್ರೆಯವರ ನಾಕುತಂತಿ ಕುರಿತಾಗಿ ಹಲವು ಜನ ಬರೆದಿದ್ದಾರೆ, ವಿಮರ್ಶಿಸಿದ್ದಾರೆ. ಆದರೆ ನಮ್ಮ ಪ್ರಯತ್ನ ಈ ಸಾಲುಗಳ ಆಳಕ್ಕೆ ಹೊಕ್ಕು ಅವುಗಳ ಆತ್ಮವನ್ನು ಬೆದಕುವುದಾಗಿದೆ.

ಬೇಂದ್ರೆಯವರು ಹುಟ್ಟುಹಾಕಿದ ಎಷ್ಟೋ ಪದಗಳು ಒಂದು ಉದ್ದೇಶದ ಅಡಿಯಲ್ಲಿ ಕಾವ್ಯದ ಒಡಲು ಸೇರುತ್ತವೆ. ಅಪಾರ ಅರ್ಥ ಹೊಂದಿರುವ ಅವು ತಮ್ಮಷ್ಟಕ್ಕೆ ತಾವು ಉಪೇಕ್ಷಿತವಲ್ಲ. ನಾಕುತಂತಿ ಪದ್ಯ ನೋಡಬಹುದು. ಮೇಲ್ನೋಟಕ್ಕೆ ನಾನು ನೀನು ಎಂಬೀ ಪದಗಳು ಎಲ್ಲರೂ ಅರ್ಥೈಸಿರುವಂತೆ ನಾನು ನೀನು ಎನ್ನುವ ಸಾಮಾನ್ಯ ಅರ್ಥ ಕೊಡುತ್ತವೆ ನಿಜ, ಆದರೆ ಇದಷ್ಟೇ ಆ ಪದಗಳ ದರ್ಶನವಲ್ಲ. ನಾನು ಎಂಬುದು ಭ್ರಮೆ, ನೀನು ಎಂಬುದು ಸತ್ಯ. ಈ ತಾತ್ವಿಕತೆ ಅರಗಿಸಿಕೊಳ್ಳಲು ನಾವು ವೇದೋಪನಿಷತ್ತು ಮತ್ತು ದರ್ಶನಗಳ ಮೊರೆಹೋಗಬೇಕು. ಬೇಂದ್ರೆ ವೈಚಾರಿಕತೆಯೊಂದಿಗೆ ಧಾರ್ಮಿಕತೆಯನ್ನೂ ಮೈಗೂಡಿಸಿಕೊಂಡ ವ್ಯಕ್ತಿಯಾಗಿದ್ದರಿಂದ

ಅವರಿಗೆ ವೇದೋಪನಿಷತ್ತುಗಳಲ್ಲಿ ಅರವಿಂದರ ತತ್ವಜ್ಞಾನದಲ್ಲಿ ಅಪಾರವಾದ ಆಸ್ಥೆಯಿತ್ತು. ಅದಕ್ಕಾಗಿಯೇ ಇಲ್ಲಿ ಅದು ಅಪೇಕ್ಷಿತ.

ಲೋಕದ ಸೃಷ್ಟಿಕರ್ತನು ಅನಂತನಾಗಿದ್ದ ಆ ಕಾಲದಲ್ಲಿ ಯಾವ ಜೀವಜಂತುವಿನ ಸುಳಿವೇ ಇರದ ಸಂದರ್ಭ, ಲೋಕದ ಸೃಷ್ಟಿಗೆ ತೊಡಗಿದ ಆ ಪರಮಾತ್ಮನು ತನ್ನ ರೂಪದೊಂದಿಗೆ ಆವಿರ್ಭವಿಸಿದ. ನಂತರ ತನ್ನ ದೈವತ್ವದ ಸಾಕ್ಷಾತ್ಕಾರಕ್ಕಾಗಿ ಲೋಕದ ಸೃಷ್ಟಿಗೆ ತೊಡಗಿದ. ತನ್ನ ಇಚ್ಛೆಯಂತೆ ಲೋಕವನ್ನು ಅಲಂಕರಿಸಿದ. ವಿಧವಿಧ ಹೂಫಲ, ಮೃಗಜಲ, ಕಾಡುಮೇಡು, ಪ್ರಾಣಿಪಕ್ಷಿ, ಜೀವಜಂತುಗಳು ಸೃಷ್ಟಿಯಾದವು. ಆದರೆ ತನ್ನ ದೊಡ್ಡಸ್ತಿಕೆಯನ್ನು ಗುರುತಿಸುವ, ಕೊಂಡಾಡುವ, ಮತ್ತು ತನ್ನ ದೈವತ್ವಕ್ಕೆ ಶರಣಾಗುವ ಯಾವ ಜೀವವೂ ಇಲ್ಲದ್ದನ್ನು ಕಂಡ. ಬುದ್ಧಿಯಿರುವ ಜೀವವೊಂದರ ಸೃಷ್ಟಿಯ ಅಗತ್ಯವೆನಿಸಿತು. ಆ ಅಗತ್ಯದ ನಿಮಿತ್ತವೇ ಮನುಷ್ಯನ ಸೃಷ್ಟಿಯಾಯಿತು. ಆದರೆ ಮನುಷ್ಯನ ಸೃಷ್ಟಿ ದೇವರ ದಾಂಪತ್ಯದ ಫಲ ಎಂದು ಎಣಿಸುವಂತಿಲ್ಲ. ಏಕೆಂದರೆ ದೇವರು ಅನಂಗ, ಅನಂತ, ಅರೂಪ.

ಬದುಕು ಎನ್ನುವ ವೀಣೆಯಲ್ಲಿ ನಾಲ್ಕು ತಂತಿಗಳಿವೆ. 'ನಾನು' 'ನೀನು' 'ಆನು' 'ತಾನು'. ನಾನು ನೀನು ಕೂಡಿದ್ದರ ಫಲ ಮೂರನೆಯ ಜೀವ ಮತ್ತು ನಮ್ಮನ್ನು ನಿಯಂತ್ರಿಸುವ ಒಂದು ಪರಮ ಶಕ್ತಿ ಪರಮಾತ್ಮ ಎಂದಾಗಿದೆ. ಇದನ್ನೇ ಎಲ್ಲ ಆಧ್ಯಾತ್ಮಿಕ ಯೋಗಿಗಳು, ಕವಿವರ್ಯರು ಹೇಳಿದ್ದಾರೆ. ಆದರಾಚೆಗೆ ನೋಡುವುದಾದರೆ ಈ ಬದುಕು ಸಂಗೀತಮಯವಾದುದು. ಸಂಗೀತದ ಹೊರತು ಎಲ್ಲವೂ ಶುಷ್ಕ. ನಮ್ಮ ಉಸಿರಿನ ಏರಿಳಿತಗಳು ನಾದಮಯವಾಗಿವೆ. ಹೊರಗೆ ಸುಳಿವ ಗಾಳಿಯೂ ನಾದಮಯವಾಗಿದೆ. ಓಂ ಎಂಬುದು ಆಧ್ಯಾತ್ಮದ ಅತ್ಯಂತ ಗಹನವಾದ ರಹಸ್ಯಗಳಲ್ಲಿ ಒಂದು. ನಮ್ಮ ಉಸಿರಿನ ರಹಸ್ಯವೇ ಅದು. ಅದು ನಾದ ಬ್ರಹ್ಮ. ಮೂಲತಃ ಬ್ರಹ್ಮಸ್ವರೂಪಿಯಾದ ಈ ನಾದ, ಬ್ರಹ್ಮಾಂಡದ ಜೀವಂತಿಕೆಗೆ ಸಾಕ್ಷಿಯಾಗಿದೆ. ಉಸಿರಾಟದ ಹೊರತು ಜೀವಜಗತ್ತಿನ ಅಸ್ತಿತ್ವವಿಲ್ಲ. ಅಂದರೆ ನಾದಬ್ರಹ್ಮದ ಹೊರತು ಎಲ್ಲವೂ ಶೂನ್ಯ, ನಿರಾಳ. ಇದೇ ಬೇಂದ್ರೆಯವರ ಇಂಗಿತ.

ಈ ನಾದ, ಬ್ರಹ್ಮನಲ್ಲಿದ್ದಾಗ ಏಕವಾಗಿತ್ತು. ಲೋಕಕ್ಕೆ ಬಂದು ಅನೇಕವಾಯಿತು. ಅದು ಆನೆಯೋ, ಕುದುರೆಯೋ, ಪಶುವೋ, ಪಕ್ಷಿಯೋ ಆಗಿ ಕಾಣುತ್ತದೆ. ಇರುವುದು ಒಂದು ಕಾಣುವುದು ಇನ್ನೊಂದು. ಶಬ್ದಬ್ರಹ್ಮ ಒಂದೇಯಾದರೂ ಹೇಗೆ ಅ,ಆ,ಕ,ಪ,ತ,ಲ,ವ,ಶ ಮುಂತಾಗಿ ಬೇರೆಬೇರೆಯಾಗಿ ಕಾಣುತ್ತದೆಯೋ ಹಾಗೆ. ಇದೊಂದು ಆಧ್ಯಾತ್ಮಿಕ ಅತೀಂದ್ರಿಯ ಸತ್ಯ. ಆದರೆ ಆ ಸತ್ಯ ಎಲ್ಲರಿಗೂ ನಿಲುಕುವಂಥದಲ್ಲ. ಅದು ಮಾಯೆಯ ಪರದೆಗಳ ಹಿಂದೆ ಮರೆಯಾಗಿರುತ್ತದೆ. ಆ ಪರದೆಗಳನ್ನು ಸರಿಸುವುದು ಅಷ್ಟು ಸುಲಭವಾದುದಲ್ಲ. ಏಕೆಂದರೆ ಸಂಸಾರ, ಸಂಬಂಧ, ಪ್ರೇಮ, ಕಾಮ, ಅಪೇಕ್ಷೆ, ದುಃಖ ಎಲ್ಲವೂ ಅದನ್ನು ಸುತ್ತುವರಿದಿರುತ್ತದೆ. ಅವುಗಳ ಬಂಧನದಿಂದ ಬಿಡುಗಡೆಯಾದಾಗ 'ತಾನು' ಪ್ರತ್ಯಕ್ಷವಾಗುತ್ತದೆ. ಆ ತಾನೇ

ನಾನಾಗಿ, ನೀನಾಗಿ, ಆನಾಗಿ ಎಲ್ಲೆಲ್ಲೂ ಇರುವುದನ್ನು ಕಾಣುತ್ತೇವೆ. ಬೇಂದ್ರೆಯವರ ಇನ್ನೊಂದು ಪದ್ಯ ಹಕ್ಕಿ ಹಾರುತಿದೆ ನೋಡೋಣ.

ಬೇಂದ್ರೆಯವರು ಈ ಕವನದಲ್ಲಿ ಕಾಲವನ್ನು ಹಾರುತ್ತಿರುವ ಹಕ್ಕಿಗೆ ಹೋಲಿಸಿದ್ದಾರೆ. ಈ ಕವನದ ಮೊದಲ ನುಡಿಯಲ್ಲಿ ಕಾಲಪಕ್ಷಿಯನ್ನು ಪರಿಚಯಿಸುವ ವಿಧಾನ ಅತ್ಯಂತ ಸ್ವಾರಸ್ಯ ಮತ್ತು ಆಹ್ಲಾದಕರವಾಗಿದೆ.

ಈ ಕಾಲಪಕ್ಷಿಯ ಗತಿ ಎಂತಹದು? ಗಾವುದ ಗಾವುದ ಗಾವುದ ಮುಂದಕೆ! ಎಂದು ಹೇಳುವ ಮೂಲಕ ಈ ಕಾಲಪಕ್ಷಿಯ ಚಲನಶೀಲತೆಯನ್ನು ಗುರುತಿಸುತ್ತಿದ್ದಾರೆ. ಈ ಗಾವುದ ದೂರ ಕ್ರಮಿಸುವ ಕಾಲಪಕ್ಷಿಗೆ ಬೇಕಾಗುವ ಸಮಯ ಮಾತ್ರ 'ಎವೆ ತೆರೆದಿಕ್ಕುವ ಹೊತ್ತು' ಎನ್ನುವಲ್ಲಿ ಬೆರಗನ್ನು ವ್ಯಕ್ತಪಡಿಸುತ್ತಿದ್ದಾರೆ. ಕೇವಲ ಕಣ್ಣು ಮಿಟುಕಿಸುವ ಸಮಯದಲ್ಲಿ ಈ ಕಾಲಪಕ್ಷಿ ದೂರ ಬಹುದೂರ ಕ್ರಮಿಸಬಲ್ಲದು ಎಂಬುದರ ಲಕ್ಷಾರ್ಥ ಆಧ್ಯಾತ್ಮದ ಉತ್ತುಂಗವಾಗಿದೆ. ಏಕೆಂದರೆ ವಿಶ್ವವನ್ನು ವ್ಯಾಪಿಸಿರುವ ಈ ಕಾಲಪಕ್ಷಿ ತನ್ನ ಚಲನೆಯ ಮೂಲಕ ನಮ್ಮ ಅಸ್ತಿತ್ವವನ್ನೇ ಬದಲಾವಣೆಗೆ ಒಳಪಡಿಸುತ್ತದೆ. ಶಂಕರಾಚಾರ್ಯರೂ ದೇಶ ಮತ್ತು ಕಾಲ ಇವು ಕೇವಲ ಭ್ರಮೆ ಎನ್ನುತ್ತಾರೆ. ಅಂದರೆ ಈಶ ಮತ್ತು ದಾಸನ ನಡುವೆ ಹುಟ್ಟೂ ಇಲ್ಲ ಸಾವೂ ಇಲ್ಲ, ಆಗೂ ಇಲ್ಲ ಈಗೂ ಇಲ್ಲ. ಆದಿಯೂ ಇಲ್ಲ ಅಂತ್ಯವೂ ಇಲ್ಲ. ಕಣ್ಣಿಗೆ ಕಾಣುವ ಒಂದು ಭ್ರಮೆ ಅಷ್ಟೆ ಅದು ಎಂಬ ಪರಮೋಚ್ಚ ಆಧ್ಯಾತ್ಮಿಕ ರಹಸ್ಯವನ್ನು ಗಮನಿಸಬಹುದು.

ಬೇಂದ್ರೆ ಆ ಕಾಲಪಕ್ಷಿಯ ಸ್ವರೂಪ ಚಿತ್ರಣ ನೀಡುತ್ತ: ಕರಿನೆರೆ ಬಣ್ಣದ ಪುಚ್ಚಗಳುಂಟು, ಬಿಳಿ–ಹೊಳೆ ಬಣ್ಣದ ಗರಿ–ಗರಿಯುಂಟು ಎಂದು ಮುಂತಾಗಿ ಹೇಳುತ್ತಾರೆ. ವಾಸ್ತವದಲ್ಲಿ ಈ ಸಾಲುಗಳನ್ನು ಅರ್ಥೈಸುವುದೇ ಕಷ್ಟ. ಏಕೆಂದರೆ ಕಾಲ ಎನ್ನುವ ಹಕ್ಕಿಯು ಕಲ್ಪನೆಯೂ ಹೌದು, ವಾಸ್ತವವೂ ಹೌದು. ಅದು ಕಾಲಮಿತಿಗೆ ಒಳಪಟ್ಟಿದ್ದೂ ಹೌದು, ಕಾಲಾತೀತವೂ ಹೌದು. ಅದು ನಿಜವಾಗಿಯೂ ಏನು ಎಂಬುದರ ಅರಿವು ಇನ್ನೂ ಸ್ಪಷ್ಟವಾಗಬೇಕಿದೆ. ಆದರೂ ಕರಿ ಅನ್ನುವುದನ್ನು ರಜೋಮಯವಾದ ಸಾವು ಎಂದು ಕವಿವರ್ಯರು ಅರ್ಥೈಸಿದ್ದಾರೆ. ಹಾಗಾದರೆ ಬಿಳಿ ಎಂಬುದು ಬದುಕು ಎಂದಾಗುತ್ತದೆ. ಸಾವಿನೆದುರು ಬದುಕು ಹುಸಿ ಮತ್ತು ತಾತ್ಕಾಲಿಕ ಎನ್ನುವುದು ದಿಟವೇಯಾದರೂ ಅದು ಹೊಳೆಯುವ ಗುಣ ಹೊಂದಿದೆ. ಸಂಸಾರವನ್ನು ಹೊಳೆಸುತ್ತಾ ಅದರ ಹೊಳಪಿನಲ್ಲಿ ನಮ್ಮ ಬದುಕನ್ನು ಬಂಧಿಸಿಬಿಡುತ್ತದೆ ಅದು. ಈ ಸಂಸಾರಕ್ಕೆ ಹಲವು ಬಣ್ಣಗಳು. ಮಡದಿ, ಮನೆ, ಯೌವನ, ಕುಟುಂಬ, ಸ್ನೇಹ ಇತ್ಯಾದಿ. ಹಾಗಾದರೆ ಕಾಲ ಪಕ್ಷಿಯ ರೆಕ್ಕೆಗಳು ಪಾಪ ಪುಣ್ಯಗಳಿಗೆ ಹೋಲಿಸಬಹುದೇ ಎಂಬುದನ್ನು ಗಮನಿಸಬೇಕಾಗಿದೆ.

ಬೇಂದ್ರೆಯವರ ಈ ಕಾಲಪಕ್ಷಿ ಸಣ್ಣ ಸಣ್ಣ ರಾಜ್ಯಗಳನ್ನು, ದೊಡ್ಡ ದೊಡ್ಡ ಸಾಮ್ರಾಜ್ಯಗಳನ್ನು ಹುಟ್ಟಿಸಿ ಬೆಳೆಯಿಸುತ್ತದೆ. ದುರ್ಬಲರನ್ನು ಸಬಲರನ್ನಾಗಿಯೂ ಸಬಲರನ್ನು ದುರ್ಬಲರನ್ನಾಗಿಯೂ ಮಾಡುತ್ತದೆ. ಅದು ಪರಿಶ್ರಮದ ಪ್ರತಿಫಲ

ಕೊಡುತ್ತದೆ. ಉದಾಸೀನ ಮಾಡಿದರೆ ಬೆಳೆದು ನಿಂತ ತೆನೆಗಳನ್ನು ನಷ್ಟಗೊಳಿಸುತ್ತದೆ! ಹಾಗಂತ ಕಾಲಪಕ್ಷಿಯ ಕೆಲಸ ಕೇವಲ ವಿನಾಶಕಾರಿಯಲ್ಲ, ಹೊಸ ಮನ್ವಂತರದ ಶುಭೋದಯವಾಗುವುದೂ ಈ ಕಾಲಪಕ್ಷಿಯಿಂದಲೇ. ಯಾಕೆಂದರೆ ತನ್ನ ರೆಕ್ಕೆಗಳನ್ನು ಬೀಸುವ ಮೂಲಕ ಈ ನಿರ್ಜೀವ ಮನ್ವಂತರಗಳಿಗೆ ಚೈತನ್ಯ ನೀಡುವುದು ಈ ಕಾಲಪಕ್ಷಿಯ ಕೆಲಸ. ಭೂಮಂಡಲದಲ್ಲಿ ಜರುಗಿದ ಎಲ್ಲ ಬದಲಾವಣೆಗಳು, ಪುನಶ್ಚೇತನಗಳು ಎಲ್ಲವೂ ಈ ಕಾಲಪಕ್ಷಿಯ ಮಹಿಮೆಯೇ! ಹೊಸ ಕಾಲದ ಪೀಳಿಗೆಯನ್ನು ಹಾರೈಸಿ ಬೆಳೆಸುವದು ಈ ಕಾಲಪಕ್ಷಿಯೇ. ಇದನ್ನೆಲ್ಲ ಪರಿವೀಕ್ಷಿಸುವ ಕಣ್ಣು ನಮಗೆ ಬೇಕು. ಅಂತಲೇ ಬೇಂದ್ರೆ ನಮ್ಮನ್ನು ಕೇಳುತ್ತಿದ್ದಾರೆ: ‘‘ಹಕ್ಕಿ ಹಾರುತಿದೆ ನೋಡಿದಿರಾ?’’

ಮಾನವ ದೃಷ್ಟಿ ತತ್ಕಾಲಕ್ಕೆ ಸೀಮಿತವಾಗಿರುತ್ತದೆ. ಆದರೆ ಕವಿಯ ನೋಟ ಕಾಲಾತೀತ, ದೇಶಾತೀತ. ಬೇಂದ್ರೆಯವರ ದೂರದೃಷ್ಟಿ ಇಲ್ಲಿ ಸ್ಪಷ್ಟವಾಗಿ ಗುರುತಿಸಬಹುದು. ಕಾಲದ ಓಟದಲ್ಲಿ ಶುಕ್ರಗ್ರಹ ಮನುಷ್ಯನಿಗೆ ಕೇವಲ ಹಳ್ಳಿಯಾಗಬಹುದು, ಚಂದ್ರಲೋಕ ಬರಿ ಊರಾಗಬಹುದು ಹಾಗೂ ಮಂಗಳಲೋಕವು ಭೂಮಿಗೆ ಅಂಗಳವಾಗಿಸಬಹುದು. ಮಾನವನಿಗೆ ಈ ಆಕಾಶಕಾಯಗಳು ಆಡಲು, ಹಾಡಲು ಹಾಗೂ ಹಾರಾಡಲು ಮಾರ್ಗಗಳಾಗಬಹುದು!

ಬೇಂದ್ರೆ ನೂರೈವತ್ತು ವರ್ಷಗಳ ಹಿಂದೆ ಹೇಳಿದ್ದು ಇಂದು ನಿಜವಾಗಿದೆ. ಭಾರತದ ಚಂದ್ರಯಾನ ಯಶಸ್ವಿಯಾಗಿದೆ. ಮಂಗಲಯಾನ ಯಶಸ್ವಿಯಾಗಿದೆ. ಒಬ್ಬ ದಾರ್ಶನಿಕ ಕವಿಯಾಗಿ ಮುಂದೆ ಸಂಭವಿಸಬಹುದಾದ ವೈಜ್ಞಾನಿಕ ಘಟನೆಗಳನ್ನು ಕಾಲೋಚಿತಗೊಳಿಸಲು ಹಕ್ಕಿಯ ಉಪಮೆ ಅತ್ಯಂತ ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದಾರೆ ಬೇಂದ್ರೆ. ಮಾನವನು ಭೂಮಿಯಿಂದ ಇತರ ಗ್ರಹ, ಉಪಗ್ರಹಗಳಿಗೆ ಸಂಚರಿಸಬಹುದಾದ ದಾರ್ಶನಿಕ ಮುನ್ನೋಟ ಈ ನುಡಿಯಲ್ಲಿ ವ್ಯಕ್ತವಾಗಿದೆ.

ವಿಶ್ವಗಳು ಎಷ್ಟು ಎಂಬುದು ಯಾರು ಬಲ್ಲವರು. ಅವು ಅನೇಕವಿರಬಹುದು. ಆ ವಿಶ್ವಗಳ ದಿಕ್ಕುಗಳು ಅನಂತವಾಗಿರಬಹುದು. ಆದರೆ ಕಾಲಪಕ್ಷಿಯು ಆ ಎಲ್ಲ ಮಂಡಲಗಳ ಅಂಚನ್ನು ಮುಟ್ಟಿದೆ. ಮತ್ತು ಆ ಅನಂತತೆಯ ಆಚೆಗೂ ಸಹ ತನ್ನ ಚುಂಚನ್ನು ಚಾಚಿದೆ. ಇಂತಹ ಹಕ್ಕಿ ಹಾರುತ್ತಿರುವದನ್ನು ನೀವು ನೋಡಿದಿರಾ? ಎಂದು ಪ್ರಶ್ನಿಸುತ್ತಾರೆ ಬೇಂದ್ರೆ. ಏಕೆಂದರೆ ಈ ದರ್ಶನ ವರಕವಿಗೆ ಮಾತ್ರ ಸಾಧ್ಯ! ಅದೂ ಆಧ್ಯಾತ್ಮಿಕ ಯೋಗಿಗೆ ಮಾತ್ರ ಸಾಧ್ಯ. ಅಂತಹ ಆಧ್ಯಾತ್ಮಿಕತೆ ಎಲ್ಲರೂ ಬೆಳೆಸಿಕೊಳ್ಳಬೇಕು ಎಂಬುದು ಬೇಂದ್ರೆ ಆಶಯ.

**ಪರಾಮರ್ಶನ ಗ್ರಂಥಗಳು:**


1. ಕುವೆಂಪು, (2003), ಜಲಗಾರ, ಮೈಸೂರು: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ.
2. ಕುವೆಂಪು, (2003), ಯಮನಸೋಲು, ಮೈಸೂರು: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ.
3. ಕುವೆಂಪು, (2003), ಮಹಾರಾತ್ರಿ, ಮೈಸೂರು: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ.
4. ಬೇಂದ್ರೆ ದ.ರಾ., (1964), ನಾಕುತಂತಿ, ಧಾರವಾಡ: ಸಮಾಜ ಪುಸ್ತಕಾಲಯ.
5. ಬೇಂದ್ರೆ ದ.ರಾ., (1932), ಹಕ್ಕಿಹಾರುತಿದೆ ನೋಡಿದಿರಾ?, ಧಾರವಾಡ: ಮನೋಹರ ಗ್ರಂಥಮಾಲೆ.
6. ನರಹಳ್ಳಿ ಬಾಲಸುಬ್ರಮಣ್ಯ, (2004), ಬಾ ಕುವೆಂಪು ದರ್ಶನಕೆ, ಬೆಂಗಳೂರು: ಅಭಿನವ ಪ್ರಕಾಶನ.
7. ವಾಮನ ಬೇಂದ್ರೆ, (1974), ಸಾಹಿತ್ಯದ ವಿರಾಟ ಸ್ವರೂಪ, ಧಾರವಾಡ: ಸಮಾಜ ಪುಸ್ತಕಾಲಯ.